ವರ್ಷ	ಪರೀಕ್ಷೆಗೆ ಕುಳಿತವರ ಸಂಖ್ಯೆ	ಮೊದಲನೇ ದರ್ಜೆ	ಎರಡನೇ ದರ್ಜೆ	ಮೂರನೇ ದರ್ಜೆ	ಒಟ್ಟು
(ದಾವಣಗೆರೆ) ಮಾಯಾಕೊಂಡ					
1994-95	12	03	02	04	09
1995-96	13	01	02	06	09
1996-97	16	00	01	00	01
1997-98	16	01	04	06	11
1998-99	15	01	03	05	09
ಜಗತ (ಗುಲ್ಬರ್ಗ)					
1994-95	20	01	01	02	04
1995-96	14	00	00	01	01
1996-97	19	00	02	01	03
1997-98	25	00	04	06	10
1998-99	23	01	05	06	12

ಖಾಸಗಿ ಶಾಲೆಗಳಲ್ಲಿ ಶಿಕ್ಷಕರ ಆಕ್ರಮ ನೇಮಕಾತಿ

1918 (2580) ಶ್ರೀ ಬೆಲ್ಲದ್ ಚಂದ್ರಕಾಂತ್ ಗುರಪ್ಪ (ಧಾರವಾಡ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ರಾಜ್ಯದಲ್ಲಿ ಸರ್ಕಾರದ ನಿಯಮಕ್ಕೆ ವಿರುದ್ಧವಾಗಿ ಖಾಸಗಿ ಪ್ರಾಥಮಿಕ ಹಾಗೂ ಮಾಧ್ಯಮಿಕ ಶಾಲೆಗಳಲ್ಲಿ ಶಿಕ್ಷಕರನ್ನು ನೇಮಿಸಿಕೊಂಡ ಜಿಲ್ಲಾವಾರು ಶಾಲೆಗಳು ಯಾವುವು; ಅವುಗಳನ್ನು ನಡೆಸುತ್ತಿರುವ ಸಂಸ್ಥೆಗಳ ಹೆಸರು ಹಾಗೂ ಆ ಸಂಸ್ಥೆಗಳ ಮುಖ್ಯಸ್ಥರು ಯಾರು;

ಆ) ಈ ಅಕ್ರಮವಾಗಿ ಪ್ರಾರಂಭಗೊಂಡ ಶಾಲೆಗಳು ಎಷ್ಟು ಹಾಗೂ ಈ ಶಾಲೆಗಳ ಪ್ರಾರಂಭಕ್ಕೆ ಯಾವ ಅಧಿಕಾರಗಳು ಕಾರಣರು ಹಾಗೂ ಅವರ ಮೇಲೆ ಸರ್ಕಾರದ ಕ್ರಮವೇನು; ವಿವರ ತಿಳಿಸುವುದು;

ಇ) ಈ ಅಕ್ರಮ ಪ್ರಾರಂಭಗೊಂಡ ಶಾಲೆಗಳಿಂದ ಮೂರು ವರ್ಷಗಳಲ್ಲಿ ಸರ್ಕಾರಕ್ಕಾದ ನಷ್ಟ ಎಷ್ಟು? ವಿವರ ತಿಳಿಸುವುದು?

ಶ್ರೀ ಹೆಚ್.ವಿಶ್ವನಾಥ್ (ಪ್ರಾಥಮಿಕ ಮತ್ತು ಪೌಢ ಶಿಕ್ಷಣ ಸಚಿವರು) :

ಅ) ನಿಯಮಕ್ಕೆ ವಿರುದ್ಧವಾಗಿ ಖಾಸಗಿ ಪ್ರಾಥಮಿಕ, ಮಾಧ್ಯಮಿಕ ಶಾಲೆಗಳಲ್ಲಿ ಶಿಕ್ಷಕರನ್ನು ನೇಮಿಸಿಕೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ. ಆದುದರಿಂದ ಅಂತಹ ಶಾಲೆಗಳನ್ನು ನಡೆಸುತ್ತಿರುವ ಸಂಸ್ಥೆಗಳ ಹೆಸರು ಹಾಗೂ ಸಂಸ್ಥೆಗಳ ಮುಖ್ಯಸ್ಥರು ಯಾರು ಎಂದು ವಿವರ ನೀಡುವ ಪ್ರಶ್ನೆ ಉದ್ಭವಿಸುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಹಿರೇಕೆರೂರು ತಾಲ್ಲೂಕಿನಲ್ಲಿ ಭಾಗ್ಯಜ್ಯೋತಿ ಫಲಾನುಭವಿಗಳು

1919 (2581) ಶ್ರೀ ಬೆಲ್ಲದ ಚಂದ್ರಕಾಂತ್ ಗುರಪ್ಪ (ಧಾರವಾಡ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ಹಿರೇಕೆರೂರು ತಾಲ್ಲೂಕಿನಲ್ಲಿ ಆಯ್ಕೆ ಮಾಡಿದ ಭಾಗ್ಯಜ್ಯೋತಿ ಫಲಾನುಭವಿಗಳಿಗೆ ಎಷ್ಟು; (ವಿವರ ನೀಡುವುದು)

ಆ) ಗ್ರಾಮವಾರು ಗ್ರಾಮ ಸಭೆಯಲ್ಲಿ ಆಯ್ಕೆ ಮಾಡಿದ ಫಲಾನುಭವಿಗಳು ಎಷ್ಟು; (ವಿವರ ನೀಡುವುದು)

ಇ) ಈಗ ತಾಲ್ಲೂಕು ಪಂಚಾಯತ್ ಸಮಿತಿಯಲ್ಲಿ ಆಯ್ಕೆ ಮಾಡಿದ ಫಲಾನುಭವಿಗಳಲ್ಲಿ ಎಷ್ಟು ಫಲಾನುಭವಿಗಳು ಗ್ರಾಮ ಸಭೆಯಲ್ಲಿ ಆಯ್ಕೆ ಆಗಿಲ್ಲ;

ಈ) ಫಲಾನುಭವಿಗಳು ಗ್ರಾಮ ಸಭೆಯಲ್ಲಿ ಆಯ್ಕೆ ಆಗಬೇಕಾಗಿರುವುದು ಕಡ್ಡಾಯವೇನು;

ಉ) ಈ ನಿಯಮ ಹಿರೇಕೆರೂರು ತಾಲ್ಲೂಕು ಪಂಚಾಯತ್ ಸಮಿತಿಯಲ್ಲಿ ಪಾಲನೆ ಆಗದಿದ್ದರೆ ಅದನ್ನು ಕಡ್ಡಾಯ ಮಾಡಬಹುದೆ?

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು) :

ಅ) ಹಿರೇಕೆರೂರು ತಾಲ್ಲೂಕಿನಲ್ಲಿ 1999-2000ನೇ ಸಾಲಿಗಾಗಿ 1005 ಭಾಗ್ಯಜ್ಯೋತಿ ಫಲಾನುಭವಿಗಳನ್ನು ಆಯ್ಕೆ ಮಾಡಲಾಗಿದೆ.

ಆ) 3339 ಫಲಾನುಭವಿಗಳನ್ನು ಭಾಗ್ಯಜ್ಯೋತಿಯಡಿಯಲ್ಲಿ ಗ್ರಾಮ ಸಭೆಗಳಲ್ಲಿ ಆಯ್ಕೆ ಮಾಡಲಾಗಿದೆ.

ಇ) ಎಲ್ಲಾ ಫಲಾನುಭವಿಗಳನ್ನು ಗ್ರಾಮ ಸಭೆಯಲ್ಲಿಯೇ ಆಯ್ಕೆ ಮಾಡಲಾಗಿದೆ.

ಈ) ಹೌದು.

ಉ) ಹೌದು.